International Journal of Kannada Research
www.kannadajournal.com

ISSN: 2454–5813
IJKR 2023; 9(4): 185-187
© 2023 IJKR
www.kannadajournal.com
Received: 26-10-2023
Accepted: 30-11-2023

**ಡಾ. ಶ್ವೇತಾರಾಣಿ ಹೆಚ್**
ಉಪನ್ಯಾಸಕ, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು,
ತುಮಕೂರು, ಕರ್ನಾಟಕ, ಭಾರತ

**Corresponding Author:**
**ಡಾ. ಶ್ವೇತಾರಾಣಿ ಹೆಚ್**
ಉಪನ್ಯಾಸಕ, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು,
ತುಮಕೂರು, ಕರ್ನಾಟಕ, ಭಾರತ

# ನೀಲಿ ಚುಕ್ಕಿಯ ನೆರಳು ಹಾಗೂ ನೋವು ಒಂದು ಹೃದ್ಯಕಾವ್ಯ ಕವನ ಸಂಕಲನಗಳಲ್ಲಿ ಸಂವೇದನೆಯ ಚಹರೆ

**ಡಾ. ಶ್ವೇತಾರಾಣಿ ಹೆಚ್**

**ಪೀಠಿಕೆ**

**ಮೂಲತಃ** ಚಿತ್ರದುರ್ಗದವರಾದ ಪ್ರೊಫೆಸರ್ ಮಧುರಾಣಿ ಇಂಗ್ಲಿಷ್ ಪ್ರಾಧ್ಯಾಪಕಿ. ಆದರೂ ಕನ್ನಡದ ಬರಹದಲ್ಲಿ ಒಲವು.ಇವರು 2016ರಲ್ಲಿ ನವಿಲುಗರಿಯ ಬೇಲಿ ಕವನ ಸಂಕಲನ ಪ್ರಕಟಿಸಿದ್ದಾರೆ.ಇವರ ಎರಡನೆಯ ಕವನ ಸಂಕಲನವೇ ನೀಲಿ ಚುಕ್ಕಿಯ ನೆರಳು.

ಅಲ್ಲದೆ ಕೆಂಡಸಂಪಿಗೆಯಲ್ಲಿ ಪ್ರಕಟವಾಗುತ್ತಿದ್ದ ಮಠದ ಕೇರಿಗಳು ಮತ್ತು ಮೈಸೂರಿನ ಆಂದೋಲನ ದಿನಪತ್ರಿಕೆಯ ಹಾಡುಪಾಡು ವಿಭಾಗದಲ್ಲಿ ಹಲವಾರು ಲೇಖನಗಳು ಪ್ರಕಟವಾಗಿವೆ.ಕಾಲ ಬದಲಾದಂತೆ ಹೊಸ ಮಾಧ್ಯಮಕ್ಕೆ ತೆರೆದುಕೊಳ್ಳುವುದು ಸಹಜ ಅದರಂತೆಯೇ ಪೇಪರ್ ಲೆಸ್ ಬರಹಗಳು ಇಂದು ಮುನ್ನೆಲೆಯಲ್ಲಿವೆ ಈ ಪೇಪರ್, ಬ್ಲಾಗ್ ಗಳು ಹೆಚ್ಚು ಪ್ರಚಲಿತದಲ್ಲಿರುವ ಈ ಕಾಲಘಟ್ಟದಲ್ಲಿ “ಈ ಹೊತ್ತಿಗೆ” ಕಾವ್ಯ ಸ್ಪರ್ಧೆಯಲ್ಲಿ ವಿಜೇತವಾದ ಮೊದಲ ಕೃತಿ ಈ ನೀಲಿ ಚುಕ್ಕಿಯ ನೆರಳು ಕಾವ್ಯವೆನ್ನುವುದು ಪ್ರಸವ ವೇದನೆ ಇದ್ದಹಾಗೆ ತೀವ್ರವಾಗಿದ್ದಾಗಲೇ ಹಡೆದು ಬಿಡಬೇಕು ಎನ್ನುವುದು ನನ್ನ ಇಂಗಿತ.ಯಾವಾಗ್ಲಾದ್ರೂ ಒಂದೋ ಎರಡೋ ಗೀಚುತ್ತೇನೆ ಆದರೂ ಈ ಕವಿತೆಗಳು ಅಪ್ಪ ಅಮ್ಮನಿಗೆ ನಡುಕಲ ಮಗನಂತೆ. ಕಾವ್ಯ ಕುತೂಹಲ ಹುಟ್ಟಿಸುವುದಿಲ್ಲ ಆದರೆ ಕುತೂಹಲ ವಿಲ್ಲದಿದ್ದರೆ ನಂತೆ ಅದರಲ್ಲಿ ಕರುಳಿದೆ.ಕಾಫಿ ಕಪ್ಪಿನ ಹೂಗಳು ಕವನದಲ್ಲಿ ಬದುಕಿನಲ್ಲಿ ಕಳೆದುಕೊಂಡ ಸಂಗಾತಿಯ ಛಾಪು ನೆನಪುಗಳು ಧುತ್ತನೆ ಅಧ್ಯಾತ್ಮಕ್ಕೆ ಇಳಿದುಬಿಡುತ್ತವೆ.

ಒಂದೇ ಕಪ್ಪಿನಲಿ ಇಬ್ಬರೂ ಕುಡಿದ
ತುಟಿಯ ಪ್ರೇಮದ ಕುರುಹಿನ ಗಮಟು
ಕೆಲವೊಮ್ಮೆ ನಾಲಿಗೆಯಿಂದ ಗಂಟಲಿಗೆ
ಕಪ್ಪು ಹಿಡಿದು ನಿನ್ನ ಮಡಿಲು ತುಂಬಿ
ರೋಮದ ಇದೆ ಗಂಟೆ ಕೂತು
ಇಡಿಯಾಗಿ ತೋಳೊಳಗೆ ಹುದುಗಿಸಿ ಆವರಿಸಿದ
ಬೆವರಿಗೂ ಕಾಫಿಗೂ ಮತ್ತೇರಿಸುವ ಘಮ

ಸುಳ್ಳೇ ರಜೆ ಆಫೀಸಿಗೆ
ಮೂಗು ಮುರಿಯುವಷ್ಟು ಘಾಟು ಸಿಗರೇಟು !
ಆದರೂ ಪೌರುಷದ ತೋಳಿನೊಳಗೆ ಮುಖ ಹುದುಗಿಸಿ
ಮಗುವಿನಂತೆ ರಚ್ಚೆ ಹಿಡಿದು, ಹಾಸಿಗೆಗೆ ಧುಮುಕದ ನಾನು
ಎದೆಗೊತ್ತಿ ಹಿಡಿದ ಕಾಫಿ ಕಪ್ಪು ಒಡೆದುಹೋಗಿದೆ ನೋಡೀಗ
ಯಾರು ಶಾಶ್ವತ ಹೇಳು ಇಲ್ಲಿ ?

ಅಂದಷ್ಟು ಸುಲಭವೇ? ಉಮ್ಮಳಿಸಿ ಬರುವ ದುಃಖವನ್ನು ಅದುಮಿಟ್ಟು ಕೊನೆ ತನ್ನನ್ನು ಸಂತೈಸಿಕೊಳ್ಳಲು ಯಾರು ಶಾಶ್ವತ ಹೇಳು ಇಲ್ಲಿ ಎಂಬ ಸ್ವ ಸಾಂತ್ವಾನ ಇಲ್ಲಿದೆ.

ಸಂಜೆಯ ಬಿಸಿ ನೀರೊಂದು ಅಂದಿನ ಕಾಫಿ ಯಾಗಬಹುದೇ ನೋಡಿಲ್ಲಿ ನನ್ನ ಹಳೆ ಕಾಫಿ ಕಪ್ಪು ಒಂದಾಗದಂತೆ ಒಡೆದುಹೋಗಿದೆ!

ಎಂದಿಗೂ ಬರಿದಾಗದ ನೆನಪುಗಳು ಮರುಕಳಿಸುವ ಬಗೆ ಇಲ್ಲಿ ವ್ಯಕ್ತವಾಗಿದೆ.

“ಒಮ್ಮೊಮ್ಮೆ ನಾಚಿಕೆಗೇಡಿ ಹೇಡಿಯಂತಹ ನಿನ್ನ ನೆನಪುಗಳನ್ನು ಎದೆಯಲಿ ಸುಟ್ಟು ರಂಜು ಕಲೆ
ನಿನ್ನ ಮೀನು ನಾನಲ್ಲ ಕವನದಲ್ಲಿ

ಗಂಡಿಗಾಗಿ ಹೆಣ್ಣು ಹಪಾ ಹಪಿ ಸುವುದಿಲ್ಲ ಜೊತೆಗೆ ಸ್ವೀಕರಿಸುವುದು ಪಡೆದುಕೊಳ್ಳುವುದು ಹೆಣ್ಣಿಗೂ ಸಹಜ ಕಡೆಗೆ ಬೆವರ ಗಮನವನ್ನೇ ಗೆಲ್ಲಿಸಿ ದೀರ್ಘ ಉಸಿರೆಳೆದು ಹೇಗೋ ಹರಸಿ ಬಂದು ಲೀನವಾದದ್ದು ನಿನ್ನೊಳಗೆ ಬೆಕ್ಕು ನಾನಲ್ಲ ನೀನು ನಾನಲ್ಲ ಎನ್ನುವಲ್ಲಿ ಹೆಣ್ಣಿನ ಅಂತರಂಗವನ್ನು ಪ್ರಚುರಪಡಿಸುತ್ತಾ ಹೋಗುತ್ತಾರೆ.

ಬೇಕುಗಳ ಪಟ್ಟಿ ದೊಡ್ಡದಿದೆ ಮನುಷ್ಯನ ಬಯಕೆ ಪರಸ್ಪರ ಅರ್ಥೈಸುವಿಕೆ ಅರ್ಥಮಾಡಿಕೊಳ್ಳುವ ನಿವೇದನೆಯನ್ನು ಇಲ್ಲಿ ಕಾಣಬಹುದು. ” ಓ ಗಂಡಸೇ ಸುಮ್ಮನಿರು ಹೆದರದಿರು ಕೆಲವಾದರೂ ತೀರಿಸುವ ಭಾಷೆ ಕೊಡು ನನ್ನ ಬೇಕುಗಳ ಪಟ್ಟಿ ದೊಡ್ಡದಿದೆ.

ಬದುಕಿಗೆ ಬೇಕಿರುವುದು ಭರವಸೆ. ಭರವಸೆಗಳೊಂದಿಗೆ ಬದುಕು ಬೆಳಕಾಗುತ್ತದೆ ಎಂಬ ಜೀವನದ ಸತ್ಯವಿಲ್ಲಿ ನಿವೇದನೆ ಗೊಂಡಿದೆ.

ನೋವು ಇಲ್ಲಿ ವೇದ್ಯ

ನೋವು ಅಪಾತ್ರಕ್ಕೊಳಗಾಗುವ ಭಾವನೆ ಆದರೆ ರಂಗಮ್ಮ ಹೋದೆಕಲ್ ಅವರು ನೋವನ್ನು ಹೃದ್ಯವಾಗಿಸಬಹುದು ಎಂದಿದ್ದಾರೆ. ನೋವು ಇಲ್ಲಿ ವೇದ್ಯ ಎನ್ನುತ್ತಾರೆ.

ರಂಗಮ್ಮ ಹೊದೇಕಲ್ ಅವರ ನೋವು ಒಂದು ಹೃದ್ಯಕಾವ್ಯ ಹನಿಗವನಗಳ ಸಂಕಲನ. ಅದರ ಅಂದವಾದ ಮುಖಪುಟ ಹಾಗೂ ಕೈಬರಹದಿಂದ ಮನ ಸೆಳೆಯುತ್ತದೆ. ಮುದ್ರಣವಾದ ತಿಂಗಳಲ್ಲೇ ಮರುಮುದ್ರಣಗೊಂಡ ಕೃತಿ. ಈ ಸಂಕಲನದ ತುಂಬೆಲ್ಲಾ ಹೂವು ಮತ್ತು ನೋವು ಬದುಕಿನ ಗಂಭೀರ ಪಾಠಗಳನ್ನು ಸರಳವಾಗಿ ಹೇಳುತ್ತಾ ಹೋಗುತ್ತವೆ.

ಬದುಕು ಹಲವು ವಿಪರ್ಯಾಸಗಳ ಆಗರ. ಕಟುವಾಸ್ತವವನ್ನು ಹೂ ನಗೆಯೊಂದಿಗೆ ಹೇಳುವುದು ಕಷ್ಟ. ಆ ಕಷ್ಟವನ್ನು ಕವಯತ್ರಿ ಇಲ್ಲಿ ಸಾಧ್ಯವಾಗಿಸಿದ್ದಾರೆ. ನೋವು ಅಪಾತ್ರಕ್ಕೊಳಗಾಗುವ ವೇದನೆ. ಅದನ್ನು ಹಿತವಾಗಿಸುವ ಬಗೆ ಇಲ್ಲಿದೆ. ಮಾತು ಬೆಳ್ಳಿ, ಮೌನ ಬಂಗಾರ ಎನ್ನುವ ಗಾದೆ ಮಾತಿದೆ. ಮೌನ ಸುಲಭಕ್ಕೆ ದಕ್ಕುವುದಿಲ್ಲ. ಆದರೆ

“ಮಾತುಗಳಾಚೆಗಿನ ಮೌನ ದಕ್ಕಿದ ದಿನ ಕವಿತೆ ಹೂವಾಗುತ್ತದೆ!"

ಹೌದು ಮೌನದ ಭಾಷೆ ತಿಳಿಯದೆ, ಅರಿಯದೆ ಕಾವ್ಯ ಕಟ್ಟಲು ಸಾಧ್ಯವಿಲ್ಲ. ಮೌನದಾಚೆಗಿನ ವೇದನೆ ತಿಳಿಯದೆ ಕಾವ್ಯ ಆಸ್ವಾದಿಸಲು ಸಾಧ್ಯವಿಲ್ಲ.

ಕ್ರೌರ್ಯ ಮತ್ತು ಕರುಣೆ ಎರಡೂ ಒಂದೇ (ಮನಸ್ಸಿನಲ್ಲಿರುತ್ತವೆ) ಹೃದಯದಲ್ಲಿರುತ್ತವೆ. ಅದನ್ನು ಕವಿತೆಯಲ್ಲಿ ಪ್ರಕಟಗೊಳಿಸುವಾಗ ಕವಯತ್ರಿ ಬಳಸಿರುವ ರೂಪಕ ಸೊಗಸಾಗಿದೆ.

ಕ್ರೌರ್ಯ, ಕಾರುಣ್ಯ ಒಂದೇ ದಾರಿಯಲ್ಲಿ ನಡೆದ ಹಾಗೆ!"
"ಕಲ್ಲಿನ ಮಗ್ಗುಲಲ್ಲೇ ಹೂವರಳುತ್ತದೆ.

ಎಷ್ಟೋಂದು ಭಿನ್ನತೆ, ಭಿನ್ನತೆಗಳ ಅಂತರ ದೂರ ಇರಬಹುದು ಆದರೇ ಅವಿರುವುದು ಒಂದೇ ಮನುಷ್ಯನಲ್ಲಿ ಅಲ್ಲವೇ.

"ಮೌನದ ಬಯಲನ್ನು ಹಾದು ಬರುವುದೆಂದರೆ
ಹೂ ಗಂಧವನ್ನು
ಎದೆಗೆ ತುಂಬಿಕೊಂಡ ಹಾಗೆ !"

ಹೌದು ಮೌನದ ಬಯಲನ್ನು ಹಾದು ಬರುವುದು ಸುಲಭವಲ್ಲ. ಮೌನದ ಬಯಲನ್ನು ಹಾದು ಬರುವುದರೊಳಗೆ ಹೂವಿನ ಪರಿಮಳವನ್ನು ಎದೆಗೆ ಇಳಿಸಿಬಿಡುವಷ್ಟು ಕಸುವು ದಕ್ಕಿರುತ್ತದೆ.
ಕಾವ್ಯ ಹುಟ್ಟುವುದೇ ನೋವಿನಲ್ಲಿ? ನೋವಿನಲ್ಲಿ ಕಾವ್ಯ ನರಳುವುದಿಲ್ಲ ಅರಳುತ್ತದೆ.

"ಸಾಲು ಸೋಲುಗಳ ಹತಾಶೆಯಲ್ಲಿಯೇ ಸಾಲು ದೀಪಗಳ ಬೆಳಗಿಕೋ!"

ಸೋತಾಗ ಹತಾಶೆಗೆ ಒಳಗಾಗದೆ, ಸೋಲಿನಿಂದ ಅನುಭವ ವೇದ್ಯವಾಗಿ ಬದುಕಿನ ಬೆಳಕು ಮೂಡಿಸಿಕೊಳ್ಳಬೇಕು ಎಂದಿದ್ದಾರೆ.

ಕಡಲು ಥೇಟು
ತಾಯಂದಿರ
ಒಡಲು"

ಕಡಲು ತನ್ನ ಒಡಲೊಳಗೆ ಎಲ್ಲವನ್ನೂ ತುಂಬಿಕೊಳ್ಳುತ್ತದೆ. ಜೀವ ನಿರ್ಜೀವ, ರಕ್ಷಕ. ಭಕ್ಷಕ ಎಲ್ಲವೂ ತುಂಬಿರುತ್ತದೆ.
ತಾಯಿಯೂ ಹಾಗೆ ಮಕ್ಕಳ ಎಲ್ಲಾ ತಪ್ಪುಗಳನ್ನು ತನ್ನೊಡಲೊಳಗೆ ಸೇರಿಸಿಕೊಂಡು ಕ್ಷಮಿಸಿಬಿಡುತ್ತಾಳೆ. ಕೆಲವೊಮ್ಮೆ ನೋವು ಕೂಡ ಹಿತವೆನಿಸುತ್ತವೆ.

ಹೊತ್ತು ಮಾರಲು
ನೋವು ಅಮೂರ್ತ!
ಸುಮ್ಮನೆ ಬಿಕ್ಕಲು ಲೋಕದ ಕಣ್ಣಲ್ಲಿ ಅನರ್ಥ"
"ಗಾಯಗಳಿರಲಿ ಬಿಡು
ನೆಲವು ನೋಯುತ್ತದಲ್ಲ"

ಪ್ರಕೃತಿ ಹೇಗೆ ವಿಶಾಲ ಮನೋಭಾವನೆಯಿಂದ ಮನುಷ್ಯ ಸಂತತಿಯನ್ನು
ಸಲಹುತ್ತಿದೆ ಆದರೆ ಮನುಷ್ಯ ಮಾತ್ರ ಪ್ರಕೃತಿಯ ವಿಶಾಲ ಗುಣಗಳಿಂದ ತಾಳ್ಮೆ, ಸಹನೆ ಯಾವುದನ್ನು ಕಲಿಯದೇ ಇನ್ನಷ್ಟು ಸಣ್ಣವನಾಗುತ್ತಿರುವ.

"ಇರಿಯದಿದ್ದರೆ ಮಾತೂ ಬಂಗಾರವೇ ಕೆಡುಕಿರದ ಮೌನವೂ ಧ್ಯಾನವೇ"

"ಗಾಯಗಳನ್ನು
ತೊರಬಾರದು
ಉಪ್ಪು ಸವರುವ
ಲೋಕವಿದು"

ಲೋಕದ ನಡೆಗೆ ಇಲ್ಲಿ ವಿಡಂಬನೆಯನ್ನು ಕಾಣಬಹುದು. ಸಂಬಂಧಗಳು ಹೇಗೆ ನೀರಸವಾಗುತ್ತವೆ ಎಂಬುದು ಇಲ್ಲಿನ ಕವಿತೆಗಳಲ್ಲಿ ವೇದ್ಯವಾಗಿವೆ. ರಂಗಮ್ಮನವರ ನೋಟ ಅಂತರಂಗದ ನೋಟ.
ಮನುಷ್ಯನಿಗೆ ಇರಬೇಕಾದ ಅಂತರಗದ ಅನಾವರಣವಿಲ್ಲಿ ಕಾಣಬಹುದು. ನೋವಿತ್ತು ನೇವರಿಸಿದೆ ಎನ್ನುವ ಅವರ ಮಾತುಗಳಲ್ಲಿ ನೋವು ಕೂಡ ಸ್ವೀಕಾರಾರ್ಹ ಎಂಬುದನ್ನು ಮನಗಾಣಬಹುದು

**ಆಕರ ಗ್ರಂಥ**

1. ನೀಲಿ ಚುಕ್ಕಿಯ ನೆರಳು : ಮಧುರಾಣಿ
2. ನೋವು ಒಂದು ಹೃದ್ಯ ಕಾವ್ಯ : ರಂಗಮ್ಮ ಹೊದೆಕಲ್